# ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿಗಳು

**ವಿಷಯ:-** 2022-23ನೇ ಸಾಲಿನ "ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಲೆಕ್ಕ ಶೀರ್ಷಿಕೆ: 2515-00-101-0-29 (ಲಿಂಕ್ ಕೋಡ್: 2515-00-196-1-14)ರಡಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಒಂದನೇ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:-** 1) ಆರ್ಥಿಕ ಇಲಾಖೆ, ಆದೇಶ ಸಂಖ್ಯೆ:ಎಫ್‌ಡಿ/01/ಟಿಎಫ್‌ಪಿ/2022, ದಿನಾಂಕ:04.04.2022.

2) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/03/ಎಎಫ್‌ಎನ್/2022 ಬೆಂಗಳೂರು ದಿನಾಂಕ:06.04.2022

3) ಸರ್ಕಾರದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಕವಿ/4/2022, ಬೆಂಗಳೂರು ದಿನಾಂಕ:23.05.2022

*******

**ಪ್ರಸ್ತಾವನೆ:**

2022-23ನೇ ಸಾಲಿಗೆ ಪಂಚಾಯತ್‌ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ: 2515-00-101-0-29(ಲಿಂಕ್ ಕೋಡ್ 2515-00-196-1-14)ರ ರಾಜ್ಯ ಆಯವ್ಯಯದಡಿ ರೂ.4699.00 ಲಕ್ಷಗಳನ್ನು ನಿಗದಿಪಡಿಸಿದೆ. ನಿಗದಿಪಡಿಸಿದ ಅನುದಾನ ರೂ.4699.00 ಲಕ್ಷಗಳಿಗೆ ಸಂಬಂಧಿಸಿದಂತೆ ಆರ್ಥಿಕ ಗುರಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ಜಿಲ್ಲೆಗಳಿಗೆ ನಿಗದಿಪಡಿಸಿದೆ ಹಾಗೂ 2022-23ನೇ ಸಾಲಿಗೆ ಹಂಚಿಕೆಯಾದ ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ಇಲಾಖಾ ಮುಖ್ಯಸ್ಥರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿದೆ.

ಮುಂದುವರೆದು, ಮೇಲೆ ಓದಲಾದ ಕ್ರಮ ಸಂಖ್ಯೆ(3) ರ ಆದೇಶದಲ್ಲಿ ಜಿಲ್ಲಾ ಪಂಚಾಯತ್ ಕಟ್ಟಡಗಳ ನಿರ್ವಹಣೆ ಲೆಕ್ಕ ಶೀರ್ಷಿಕೆ: 2515-00-101-0-29(ಲಿಂಕ್ ಕೋಡ್ 2515-00-196-1-14)ನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ವರ್ಗಾವಣೆ ಮಾಡಲಾಗಿದ್ದು, ಸದರಿ ಲೆಕ್ಕ ಶೀರ್ಷಿಕೆಯ ನಿರ್ವಹಣೆಗೆ ನಿರ್ದೇಶಕರು (ಅಭಿವೃದ್ಧಿ) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರನ್ನು ಹಣ ಸೆಳೆಯುವ ಅಧಿಕಾರಿಯನ್ನಾಗಿ (ಡಿ.ಡಿ.ಓ) ಹಾಗೂ ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರನ್ನು ಮೇಲುರುಜು ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಪ್ರಸ್ತುತ, ಪಂಚಾಯತ್‌ರಾಜ್ ಸಂಸ್ಥೆಗಳ ಕಛೇರಿ ಕಟ್ಟಡಗಳ ನಿರ್ಮಾಣ ಯೋಜನೆಯಡಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಮುಂದುವರೆದ/ಪೂರ್ಣಗೊಂಡ ಕಾಮಗಾರಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ರೂ.1174.75 ಲಕ್ಷಗಳನ್ನು ಒಂದನೇ ಕಂತಿನ ಅನುದಾನವನ್ನಾಗಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರಿಗೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.
ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ಕೆಪಿಆರ್‌ಸಿ/-ಡಿಡಿ4ಪಿಬಿ/1/2022, ಬೆಂಗಳೂರು, ದಿನಾಂಕ:12.07.2022**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2022-23ನೇ ಸಾಲಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡದ ನಿರ್ಮಾಣ ಯೋಜನೆಯ ಲೆಕ್ಕ ಶೀರ್ಷಿಕೆ 2515-00-101-0-29 (ಲಿಂಕ್ ಕೋಡ್ :2515-00-196-1-14) ರಡಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ

--2

ಪಂಚಾಯತ್ ಕಟ್ಟಡಗಳ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಕಟ್ಟಡಗಳ ನಿರ್ಮಾಣ ವೆಚ್ಚ ಭರಿಸಲು ಒಂದನೇ ಕಂತಿನ ಅನುದಾನ **ರೂ.1174.75 (ಒಂದು ಸಾವಿರದ ಒಂದು ನೂರ ಎಪ್ಪತ್ತನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)** ಲಕ್ಷಗಳನ್ನು ಇದರೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ವಿವರಿಸಿ ಹಂಚಿಕೆ ಮಾಡಿರುವಂತೆ ಎಲ್ಲಾ 31 ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

**ಷರತ್ತುಗಳು**:

1. 2022-23ನೇ ಸಾಲಿನಲ್ಲಿ ಜಿಲ್ಲೆಗೆ ನಿಗದಿಪಡಿಸಿದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯ ಅನುಮೋದನೆ ಪಡೆದ ಹಾಗೂ ಸರ್ಕಾರದ ಮಂಜೂರಾತಿ ಪಡೆದ ಕಾಮಗಾರಿಗಳಿಗೆ ಮಾತ್ರ ವೆಚ್ಚ ಮಾಡತಕ್ಕದ್ದು.
2. ಪಂಚಾಯತ್‌ರಾಜ್ ಸಂಸ್ಥೆಗಳ ಕಛೇರಿ ಕಟ್ಟಡದ ನಿರ್ಮಾಣ ಯೋಜನೆಯಡಿ ನಿಗದಿಪಡಿಸಿದ ಆರ್ಥಿಕ ಗುರಿ ಹಾಗೂ ಭರಿಸಲಾದ ವೆಚ್ಚವನ್ನು ನಿಗದಿತ ಸಮಯದಲ್ಲಿ ಅವಲೋಕನ ತಂತ್ರಾಂಶದಡಿ ಇಂಧೀಕರಿಸುವುದು ಹಾಗೂ ಪ್ರಗತಿ ವರದಿಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.
3. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯುವುದು.
4. ಕಾಮಗಾರಿಗಳ ಅನುಷ್ಠಾನದಲ್ಲಿ ಕಡ್ಡಾಯವಾಗಿ KTPP ಕಾಯ್ದೆಯನ್ನು ಪಾಲಿಸತಕ್ಕದ್ದು.
5. ಕಾಮಗಾರಿಗಳ ವಿವರಗಳನ್ನು ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ವಿವರ ಹಾಗೂ ಛಾಯಾಚಿತ್ರಗಳನ್ನು ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸುವುದು.
6. ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನಕ್ಕೆ 31ನೇ ಮಾರ್ಚ್ 2023ರ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ವೆಚ್ಚ ಭರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಸರ್ಕಾರದ ಆದೇಶ ಆದೇಶ ಸಂಖ್ಯೆ:ಎಫ್‌ಡಿ 01 ಟಿ ಎಫ್ ಪಿ 2022, ದಿನಾಂಕ:04.04.2022. ಮತ್ತು ಕೆಪಿಆರ್‌ಸಿ-ಕವಿ/4/2022, ಬೆಂಗಳೂರು ದಿನಾಂಕ:23.05.2022 ರಂತೆ ಅಪರ ಮುಖ್ಯಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ ಇವರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

12-07-22

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

ಗೆ.

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ
6. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ,, ಗ್ರಾಅಪ ಇಲಾಖೆ.
7. ಆಯುಕ್ತರ ಆಪ್ತ ಸಹಾಯಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾ & ಪಂ.ರಾಜ್ ಇಲಾಖೆ, ಬೆಂಗಳೂರು.
8. ನಿರ್ದೇಶಕರು (ಅಭಿವೃದ್ಧಿ) ರವರ ಆಪ್ತ ಸಹಾಯಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾ & ಪಂ.ರಾಜ್ ಇಲಾಖೆ, ಬೆಂಗಳೂರು
9. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

## ಅನುಬಂಧ

**ಆದೇಶ ಸಂಖ್ಯೆ:ಕೆಪಿಆರ್‌ಸಿ/-ಡಿಡಿ4ಪಿಬಿ/1/2022, ಬೆಂಗಳೂರು, ದಿನಾಂಕ:12.07.2022.**

**ವಿಷಯ:** 2022-23ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಂದನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಕುರಿತು.

(ರೂ.ಗಳು ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಜಿಲ್ಲೆಯ ಕೋಡ್ | ಡಿಡಿಓ ಕೋಡ್ | 2022-23ನೇ ಸಾಲಿಗೆ ನಿಗದಿಪಡಿಸಿದ ಒಟ್ಟು ಅನುದಾನ (ರೂ.ಗಳು ಲಕ್ಷಗಳಲ್ಲಿ) | ಪ್ರಸ್ತುತ ಬಿಡುಗಡೆ ಮಾಡಿರುವ ಅನುದಾನ |
|---|---|---|---|---|---|
| | | | | | 1 ನೇ ತ್ರೈಮಾಸಿಕ ಅನುದಾನ |
| 1 | ಬಾಗಲಕೋಟೆ | 461 | 2900ZZ0001 | 170.00 | 42.50 |
| 2 | ಬಳ್ಳಾರಿ | 418 | 3400ZZ0001 | 206.00 | 51.50 |
| 3 | ಬೆಳಗಾವಿ | 413 | 2200ZZ0002 | 270.00 | 67.50 |
| 4 | ಬೆಂಗಳೂರು (ಗ್ರಾ) | 402 | 0300ZZ0001 | 200.00 | 50.00 |
| 5 | ಬೆಂಗಳೂರು (ನಗರ) | 401 | 0100ZZ8001 | 100.00 | 25.00 |
| 6 | ಬೀದರ್ | 419 | 3800ZZ5701 | 60.00 | 15.00 |
| 7 | ಚಾಮರಾಜನಗರ | 456 | 1000ZZ0001 | 60.00 | 15.00 |
| 8 | ಚಿಕ್ಕಬಳ್ಳಾಪುರ | 453 | 0600ZZ0001 | 100.00 | 25.00 |
| 9 | ಚಿಕ್ಕಮಗಳೂರು | 408 | 1800ZZ0017 | 65.00 | 16.25 |
| 10 | ಚಿತ್ರದುರ್ಗ | 403 | 1600ZZ0001 | 85.00 | 21.25 |
| 11 | ದಕ್ಷಿಣ ಕನ್ನಡ | 409 | 1900ZZ0047 | 260.00 | 65.00 |
| 12 | ದಾವಣಗೆರೆ | 451 | 1700ZZ0002 | 230.00 | 57.50 |
| 13 | ಧಾರವಾಡ. | 415 | 2500ZZ8798 | 130.00 | 32.50 |
| 14 | ಗದಗ | 462 | 2600ZZ0001 | 100.00 | 25.00 |
| 15 | ಹಾಸನ | 410 | 1300ZZ0003 | 200.00 | 50.00 |

| | | | | | |
|---|---|---|---|---|---|
| 16 | ಹಾವೇರಿ | 463 | 2700ZZ0001 | 150.00 | 37.50 |
| 17 | ಕಲಬುರಗಿ | 417 | 3200ZZ0003 | 75.00 | 18.75 |
| 18 | ಕೊಡಗು | 411 | 1200ZZ0001 | 150.00 | 37.50 |
| 19 | ಕೋಲಾರ | 404 | 0700ZZ8002 | 200.00 | 50.00 |
| 20 | ಕೊಪ್ಪಳ | 466 | 1500ZZ0010 | 200.00 | 50.00 |
| 21 | ಮಂಡ್ಯ | 412 | 1100ZZ0001 | 80.00 | 20.00 |
| 22 | ಮೈಸೂರು | 407 | 0900ZZ0001 | 85.00 | 21.25 |
| 23 | ರಾಯಚೂರು | 420 | 3600ZZ0001 | 333.00 | 83.25 |
| 24 | ರಾಮನಗರ | 452 | 0400ZZ0001 | 115.00 | 28.75 |
| 25 | ಶಿವಮೊಗ್ಗ | 405 | 1400ZZ0002 | 55.00 | 13.75 |
| 26 | ತುಮಕೂರು | 406 | 0800ZZ0001 | 130.00 | 32.50 |
| 27 | ಉತ್ತರಕನ್ನಡ | 416 | 3000ZZ0080 | 65.00 | 16.25 |
| 28 | ಉಡುಪಿ | 457 | 2000ZZ0001 | 100.00 | 25.00 |
| 29 | ವಿಜಯಪುರ | 414 | 2800ZZ1952 | 350.00 | 87.50 |
| 30 | ಯಾದಗಿರಿ | 421 | 3300ZZ0001 | 100.00 | 25.00 |
| 31 | ವಿಜಯನಗರ | 467 | 3500ZZ0001 | 275.00 | 68.75 |
| **ಒಟ್ಟು** | | | | **4699.00** | **1174.75** |

12-07-22

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.